ಕರ್ನಾಟಕ ಸರ್ಕಾರ

# ಉಪ ತಹಶೀಲ್ದಾರರು ಕರೂರು ಇವರ ನ್ಯಾಯಾಲಯ, ಕರೂರು

ಸಂ/ಕಂ/ವಿವಾದ/174/2014-15 ದಿನಾಂಕ:- 03 -06-2016

ಉಪಸ್ಥಿತರು:- ಜಿ ಭೈರಣ್ಣ
ಉಪ ತಹಶೀಲ್ದಾರರು, ಕರೂರು

**ವಾದಿಗಳು**
ಸಿದ್ದಲಿಂಗಯ್ಯ ತಂದೆ ರುದ್ರಯ್ಯಸ್ವಾಮಿ
ಹಾವಿನಹಾಳು ಗ್ರಾಮ ಸಿರುಗುಪ್ಪ (ತಾ)

**ಪ್ರತಿವಾದಿಗಳು**
ಸೂಗೂರು ವೀರೇಶಗೌಡ ತಂದೆ ವೀರಭದ್ರಗೌಡ
ಉಪ್ಪಾರು ಹೊಸಳ್ಳಿ ಗ್ರಾಮ ಸಿರುಗುಪ್ಪ (ತಾ)

**ವಿವಾದಿತ ಜಮೀನಿನ ವಿವರ**

| ಗ್ರಾಮದ ಹೆಸರು | ಸರ್ವೆ ನಂಬರ್ | ವಿಸ್ತೀರ್ಣ (ಎಕರೆ) | ಹ.ಬ. ಸಂಖ್ಯೆ | ವಹಿವಾಟು ಸಂಖ್ಯೆ |
|---|---|---|---|---|
| ಉಪ್ಪಾರು ಹೊಸಳ್ಳಿ | 254/ಬಿ1 | 3-05 | 43/2013-2014 | 109/2013-2014 |

**ಪೀಠಿಕೆ:-**

ಸಿರುಗುಪ್ಪ ತಾಲೂಕಿನ ಉಪ್ಪಾರು ಹೊಸಳ್ಳಿ ಗ್ರಾಮದ ಸ.ನಂ.254/ಬಿ1 ವಿಸ್ತೀರ್ಣ 3-05 ಎಕರೆ ಜಮೀನಿಗೆ ಸಂಬಂಧಿಸಿದಂತೆ ಮೋಕಿ ಪಾಲು ವಿಭಾಗ ಪ್ರಕಾರ ಬಿ.ದೊಡ್ಡಬಸಯ್ಯ, ಈರಮ್ಮ ಜಂಟಿಪಟ್ಟಾ ಇಂದ ಸಿದ್ದಲಿಂಗಯ್ಯ ತಂದೆ ರುದ್ರಯ್ಯಸ್ವಾಮಿ ಇವರ ಹೆಸರಿನಲ್ಲಿ ಖಾತೆ ಬದಲಾವಣೆ ಮಾಡಲು ನಮೂನೆ 21 ನೋಟೀಸನ್ನು ಪ್ರಚುರಪಡಿಸಲಾಗಿ ನಿಗದಿತ ಅವಧಿಯೊಳಗೆ ಸೂಗೂರು ವೀರೇಶಗೌಡ ತಂದೆ ವೀರಭದ್ರಗೌಡ ಉಪ್ಪಾರು ಹೊಸಳ್ಳಿ ಇವರು ದಿನಾಂಕ 29-11-2013 ರಂದು ತಕರಾರು ಅರ್ಜಿ ಸಲ್ಲಿಸಿರುತ್ತಾರೆ. ಸದರಿ ಕಡತವನ್ನು ಮುಂದಿನ ಸೂಕ್ತ ಕ್ರಮಕ್ಕಾಗಿ ಕಂದಾಯ ಪರಿವೀಕ್ಷಕರು ಕರೂರು ಇವರು ಈ ಕ್ಲೇರಿಗೆ ಸಲ್ಲಿಸಿರುತ್ತಾರೆ.

ಕರ್ನಾಟಕ ಭೂ ಕಂದಾಯ ಕಾಯ್ದೆ 1964 ಕಲಂ 129 ರ ಅಡಿಯಲ್ಲಿ ವಿಚಾರಣೆಯನ್ನು ಕೈಗೆತ್ತಿಕೊಳ್ಳಲು ತೀರ್ಮಾನಿಸುತ್ತಾ ಪ್ರಕರಣದಲ್ಲಿ ವಾದಿ ಮತ್ತು ಪ್ರತಿವಾದಿಗಳಿಗೆ ವಿಚಾರಣೆಗೆ ಹಾಜರಾಗಲು ಲಿಖಿತ ತಿಳುವಳಿಕೆ ನೋಟೀಸು ನೀಡುತ್ತಾ ವಿಚಾರಣೆಯನ್ನು ದಿ.27-10-2014,10-11-2014,24-11-2014,15-12-2014, 29-12-2014, 12-01-2015, 21-08-2015, 18-09-2015, 05-10-2015, 30-10-2015, 02-11-2015, 01-02-2016, 11-03-2016, 02-04-2016,22-04-2016 ಮತ್ತು 13-05-2016 ರಂದು ಪ್ರಕರಣಕ್ಕೆ ಸಂಬಂಧಿಸಿದಂತೆ ವಿಚಾರಣೆ ನಡೆಸಲಾಯಿತು. ವಿಚಾರಣೆಯಲ್ಲಿ ವಾದಿ ಮತ್ತು ಪ್ರತಿವಾದಿಗಳಿಂದ ಮಂಡಿಸಿದ ವಾದವನ್ನು ಆಲಿಸುತ್ತಾ ವಿವಾದಕ್ಕೆ ಸಂಬಂಧಿಸಿದಂತೆ ಕಾರಣಗಳು ಈ ರೀತಿ ಇರುವುದಾಗಿ ವ್ಯಕ್ತವಾಗಿದೆ.

ಪುಟ 2 ಕ್ಕೆ

ವಾ:-

ವಾದಿಗಳು ಆದ ಸಿದ್ಧಲಿಂಗಯ್ಯ ತಂದೆ ರುದ್ರಯ್ಯಸ್ವಾಮಿ ಹಾವಿನಹಾಳು ಗ್ರಾಮ ಇವರು ಉಪ್ಪಾರು ಹೊಸಳ್ಳಿ ಗ್ರಾಮದ ಸ.ನಂ.254/ಬಿ1 ಎ.3-05 ಜಮೀನು ದೊಡ್ಡಬಸಯ್ಯ ಮತ್ತು ಈರಮ್ಮ ಹೆಸರಿಗೆ ಜಂಟಿ ಪಟ್ಟಾ ಇದ್ದು ಪಾಲು ವಿಭಾಗ ಪ್ರಕಾರ ಸಿದ್ಧಲಿಂಗಯ್ಯ ತಂದೆ ರುದ್ರಯ್ಯಸ್ವಾಮಿ ಇವರ ಹೆಸರಿಗೆ ಹಕ್ಕು ಬದಲಾವಣೆ ಸಂದರ್ಭದಲ್ಲಿ ಸೂಗೂರು ವೀರೇಶಗೌಡ ತಂದೆ ವೀರಭದ್ರಗೌಡ ಉಪ್ಪಾರು ಹೊಸಳ್ಳಿ ಗ್ರಾಮ ಇವರು ತಮ್ಮ ತಾಯಿ ಬಸಮ್ಮ ಇವರು 1947 ರಲ್ಲಿ ಸದರಿ ಜಮೀನನ್ನು ಖರೀದಿಹೊಂದಿರುತ್ತಾರೆ ಪಹಣಿಯಲ್ಲಿ ದೊಡ್ಡಬಸವಯ್ಯ ಮತ್ತು ಈರಮ್ಮ ಜಂಟಿಯಾಗಿದ್ದು ಸದ್ರಿಯವರ ಮೊಮ್ಮಕ್ಕಳು ತಮ್ಮ ಹೆಸರಿಗೆ ಹಕ್ಕು ಬದಲಾವಣೆಗೆ ಅರ್ಜಿ ಸಲ್ಲಿಸಿದ್ದು ಸದ್ರಿ ಜಮೀನು ನನ್ನ ತಾತ ಮುತ್ತಾತನ ಕಾಲದಿಂದಲೂ ನಮ್ಮ ಸ್ವಾಧೀನದಲ್ಲಿರುತ್ತದೆ ನಮ್ಮ ಒಪ್ಪಿಗೆ ಇಲ್ಲದೇ ಹಕ್ಕು ಬದಲಾವಣೆ ಮಾಡಬಾರದೆಂದು ದಿನಾಂಕ 29-11-2013 ರಂದು ತಕರಾರು ಅರ್ಜಿ ಸಲ್ಲಿಸಿರುತ್ತಾರೆ. ವಾದಿಗಳು ದಿನಾಂಕ 27-10-2014, 10-11-2014, 24-11-2014 ದಿನಾಂಕಗಳಂದು ವಿಚಾರಣೆಗೆ ಹಾಜರಾಗಿ ದಿನಾಂಕ 21-08-2015, 18-09-2015, 05-10-2015, 30-10-2015, 02-11-2015, 01-02-2016, 11-03-2016, 02-04-2016, 22-04-2015, 27-05-2016 ರಂದು ವಿಚಾರಣೆಗೆ ನೋಟೀಸ್ ನೀಡಿದಾಗ್ಯೂ ಸತತವಾಗಿ ಗೈರು ಹಾಜರು ಆಗಿರುತ್ತಾರೆ ಹಾಗೂ ಯಾವುದೇ ಮೌಖಿಕ ಅಥವಾ ಲಿಖಿತ ಹೇಳಿಕೆಗಳನ್ನು ಈವರೆಗೂ ನೀಡುರುವುದಿಲ್ಲ.

<u>ಪ್ರತಿವಾದಿಗಳು:-</u>

ಪ್ರತಿವಾದಿಗಳಾದ ಸೂಗೂರು ವೀರೇಶಗೌಡ ತಂದೆ ವೀರಭದ್ರಗೌಡ ಉಪ್ಪಾರು ಹೊಸಳ್ಳಿ ಗ್ರಾಮ ಇವರು ಸದರಿ ಸ.ನಂ.ಜಮೀನು ದೊಡ್ಡ ಬಸಯ್ಯ ಮತ್ತು ಈರಮ್ಮ ಹೆಸರಿಗೆ ಜಂಟಿ ಪಟ್ಟಾ ಇದ್ದು ಪಾಲು ವಿಭಾಗ ಪ್ರಕಾರ ಸಿದ್ಧಲಿಂಗಯ್ಯ ತಂದೆ ರುದ್ರಯ್ಯಸ್ವಾಮಿ ಇವರ ಹೆಸರಿಗೆ ಹಕ್ಕು ಬದಲಾವಣೆ ಸಂದರ್ಭದಲ್ಲಿ ತಮ್ಮ ತಾಯಿ ಬಸಮ್ಮ 1947 ರಲ್ಲಿ ಖರೀದಿ ಹೊಂದಿರುತ್ತಾರೆ ಪಹಣಿಯಲ್ಲಿ ಬ ದೊಡ್ಡಬಸಯ್ಯ ಮತ್ತು ಈರಮ್ಮ ಜಂಟಿಯಾಗಿದ್ದು ಸದ್ರಿಯವರ ಮೊಮ್ಮಕ್ಕಳು ತಮ್ಮ ಹೆಸರಿಗೆ ಹಕ್ಕು ಬದಲಾವಣೆ ಸಂದರ್ಭದಲ್ಲಿ ನಾನು ದಿ.29-11-2013 ರಂದು ತಕರಾರು ಅರ್ಜಿ ಸಲ್ಲಿಸಿರುತ್ತೇನೆ. ಇವರು ಸತತವಾಗಿ ವಿಚಾರಣೆಗೆ ಹಾಜರಾಗುತ್ತಿದ್ದಾರೆ. ಇವರು ತಮ್ಮ ತಾಯಿಯವರಾದ ಶ್ರೀಮತಿ ಸೂಗೂರು ಬಸಮ್ಮ ಗಂಡ ಸೂಗೂರು ವೀರಭದ್ರಗೌಡ ಇವರು ಅವರ ಜೀವಂತ ಕಾಲದಲ್ಲಿ ಉಪ್ಪಾರು ಹೊಸಳ್ಳಿ ಗ್ರಾಮದ ಸ.ನಂ.254/ಬಿ1 ಪೈಕಿ 3-55 ಸೆಂಟ್ಸ್ ಜಮೀನು ಬಾಪಿಕಟ್ಟಿ ಮಾರೆಯ್ಯ ಮತ್ತು ರುದ್ರಯ್ಯ ಎಂಬುವರಿಂದ ಸಿರುಗುಪ್ಪ ಉಪ ನೊಂದಣಿ ಕಛೇರಿಯಲ್ಲಿ ಪತ್ರ ಸಂ.1195/1947 ದಿ.16-10-1947 ರಂದು ಖರೀದಿ ನೊಂದಣಿ ಹೊಂದಿರುತ್ತಾರೆ. ಅಂದಿನಿಂದ ಇಂದಿನವರೆಗೂ ನಮ್ಮ ಸ್ವಾಧೀನ ಅನುಭವದಲ್ಲಿ ಇರುತ್ತದೆ ತಮ್ಮ ತಾಯಿ ದಿನಾಂಕ 19-07-1999 ರಂದು ಮೃತರಾಗಿರುತ್ತಾರೆ ತಿಳುವಳಿಕೆಯ ಕೊರತೆಯಿಂದಾಗಿ ನೋಂದಣಿ ನಂತರ ಪಹಣಿ ಪತ್ರಿಕೆಯಲ್ಲಿ ವರ್ಗಾವಣೆ ಮಾಡಿಕೊಂಡಿರುವುದಿಲ್ಲ ಆದರೆ ಈಗ ಸಿದ್ಧಲಿಂಗಯ್ಯ ತಂದೆ ರುದ್ರಯ್ಯಸ್ವಾಮಿ ಎಂಬುವರು ಆಧಾರ ರಹಿತವಾಗಿ ಸದರಿ ಜಮೀನು ತಮಗೆ ಸೇರಿದ್ದು ಎಂದು ಪಟ್ಟಾ ವರ್ಗಾವಣೆಗಾಗಿ ಅರ್ಜಿ ಸಲ್ಲಿಸಿದ್ದು ನಾವು ಆಕ್ಷೇಪಣೆ ಸಲ್ಲಿಸಿದ್ದು ಇವರು ಪೂರಕ ದಾಖಲೆಗಳನ್ನು ಸಲ್ಲಿಸದೇ ವಿಚಾರಣೆಗೆ ಹಾಜರಾಗದೇ ಯಾವುದು ಹೇಳಿಕೆಯನ್ನು ನೀಡದೇ ಗೈರು ಹಾಜರಾಗಿರುತ್ತಾರೆ. ನೋಂದಣಿ ದಸ್ತಾವೇಜು ಪ್ರಕಾರ ವರ್ಗಾವಣೆ ಮಾಡುವ ಮೂಲಕ ನಮ್ಮ ತಾಯಿ ಗತಿಸಿರುವುದರಿಂದ ನಾವಿಬ್ಬರು ಗಂಡು ಮಕ್ಕಳು ಮತ್ತು ಶ್ರೀಮತಿ ಚಂದ್ರಮ್ಮ ಗಂಡ ರುದ್ರಗೌಡ ಎಂಬ ಹೆಣ್ಣು ಮಗಳು ಮಾತ್ರ ವಾರಸುದಾರರಾಗಿದ್ದು ಸದರಿ ಜಮೀನು ಗಂಡು ಸಂತಾನವಾದ ನಮ್ಮಿಬ್ಬರ ಹೆಸರಿನಲ್ಲಿ ಹೋತಿ ವಾರಸತ್ವ ಪ್ರಕಾರ ವರ್ಗಾವಣೆ ಮಾಡಲು ಪ್ರಮಾಣ ಪತ್ರ ಸಲ್ಲಿಸಿರುತ್ತಾರೆ.

ಪುಟ 3 ಕ್ಕೆ

ವಾದಿ ಮತ್ತು ಪ್ರತಿವಾದಿಗಳ ವಾದವನ್ನು ಆಲಿಸಿ ವಿಚಾರಣೆ ಮಾಡಲಾಗಿ ವಾದಿಗಳಾದ ಸಿದ್ದಲಿಂಗಯ್ಯ ಇ. ವಿಚಾರಣಾ ಸಮಯದಲ್ಲಿ ಸತತವಾಗಿ ಗೈರು ಹಾಜರಾಗಿ ಯಾವುದೇ ಮೌಖಿಕ ಹೇಳಿಕೆಯನ್ನಾಗಲಿ ಲಿಖಿತ ಹೇಳಿಕೆಯನ್ನಾಗಲಿ ಸಲ್ಲಿಸಿರುವುದಿಲ್ಲ ಹಾಗೂ ಪ್ರತಿವಾದಿಗಳು ಲಿಖಿತ ಹೇಳಿಕೆಗಳನ್ನು ನೀಡಲಾಗಿ ಸದ್ರಿ ಆಸ್ತಿ ನೋಂದಣಿ ದಸ್ತಾವೇಜು ಪ್ರಕಾರ ನಮ್ಮ ತಾಯಿಯಾದ ಶ್ರೀಮತಿ ಸೂಗೂರು ಬಸಮ್ಮ ಗಂಡ ಸೂಗೂರು ವೀರಭದ್ರಗೌಡ ಇವರಿಗೆ ಕ್ರಯ ಪತ್ರದ ಹಕ್ಕು ಬದಲಾವಣೆ ಮಾಡಲು ಪ್ರಮಾಣ ಪತ್ರ ಸಲ್ಲಿಸಿದ್ದು, ಎಲ್ಲಾ ಅಂಶಗಳನ್ನು ವಿಚಾರಿಸಲಾಗಿ ಸದ್ರಿ ಜಮೀನು ಕ್ರಯ ಪತ್ರದನ್ವಯ ಸೂಗೂರು ಬಸಮ್ಮ ಗಂಡ ಲೇಟ್ ವೀರಭದ್ರಗೌಡ ಹೆಸರಿನಲ್ಲಿ ಹಕ್ಕು ಬದಲಾವಣೆ ಮಾಡಲು ಈ ಕೆಳಕಂಡಂತೆ

-: ಆದೇಶ :-

ಪೀಠಿಕೆಯಲ್ಲಿ ವಿವರಿಸಿದಂತೆ ಸಿರುಗುಪ್ಪ ತಾಲೂಕಿನ ಉಪ್ಪಾರ ಹೊಸಳ್ಳಿ ಗ್ರಾಮದ ಸ.ನಂ.254/ಬಿ1 ವಿಸ್ತೀರ್ಣ 3-05 ಎಕರೆ ಜಮೀನು ಕ್ರಯ ಪತ್ರ ಪ್ರಕಾರ ಸೂಗೂರು ಬಸಮ್ಮ ಗಂಡ ಲೇಟ್ ವೀರಭದ್ರಗೌಡ ಹೆಸರಿನಲ್ಲಿ ಹಕ್ಕು ಬದಲಾವಣೆ ಮಂಜೂರು ಮಾಡಲು ಆದೇಶಿಸಿದೆ.

ಈ ಆದೇಶವನ್ನು ದಿನಾಂಕ:- ೦೭ -೦೬-2016 ರಂದು ಹಕ್ಕು ಬದಲಾವಣೆ ಮಾಡಲು ತೆರೆದ ನ್ಯಾಯಾಲಯದಲ್ಲಿ ಘೋಷಣೆ ಮಾಡಲಾಗಿದೆ.

ಉಪ ತಹಶೀಲ್ದಾರರು,
ನಾಡ ಕಾರ್ಯಾಲಯ, ಕರೂರು.
ಸಿರುಗುಪ್ಪ ತಾಲೂಕು

ಇದರ ಪ್ರತಿಯನ್ನು:-

1. ವಾದಿ ಮತ್ತು ಪ್ರತಿವಾದಿಗಳಿಗೆ.
2. ತಹಶೀಲ್ದಾರರ ಕಾರ್ಯಾಲಯ ಸಿರುಗುಪ್ಪ ಗಣಕೀಕರಣ ಶಾಖೆಗೆ ಮುಂದಿನ ಕ್ರಮಕ್ಕಾಗಿ.
3. ಕಛೇರಿ ಕಡತಕ್ಕೆ.